ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ

**CC No : 717/2022**

CW : 10 PW : 3

| | | |
|---|---|---|
| ಹೆಸರು | : | ಶಂಕರ |
| ತಂದೆಯ ಹೆಸರು | : | ಹುಮ್ಲಾ ಚೌಹಾಣ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಒಕ್ಕಲುತನ |
| ಸ್ಥಳ | : | ದೇವನತೆಗನೂರು |

**(ದಿನಾಂಕ: 10-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

ಮುಖ್ಯ ವಿಚಾರಣೆ: ಸ.ಸ.ಅ ವಕೀಲರಿಂದ

ಆರೋಪಿತನನ್ನು ಪೋಲೀಸ್ ಠಾಣೆಯಲ್ಲಿ ನೋಡಿರುತ್ತೇನೆ. ಚಾಸಾ-1, 9, 11 ರವರ ಪರಿಚಯ ಇರುತ್ತದೆ. ಮೃತ ಶಾರದಾಬಾಯಿ ರಸ್ತೆ ಅಪಘಾತದಲ್ಲಿ ರೀತಿಕೊಂಡಿರುತ್ತಾಳೆ. ದಿ: 29/11/2021 ರಂದು ಸಂಜೆ 6 ರಿಂದ 6.30 ಗಂಟೆಯ ಒಳಗೆ ಅಪಘಾತ ಆಗಿರುತ್ತದೆ. ಅಪಘಾತವು ದೇವನತೆಗನೂರು ರಸ್ತೆಯ ಮೇಲೆ ಆಗಿರುತ್ತದೆ. ಅಪಘಾತವು ಚಾಸಾ-1 ರವರ ಹೊಲದ ಹತ್ತಿರ ಆಗಿರುತ್ತದೆ. ಅಪಘಾತ ಆದಾಗ ನಾನು ರಸ್ತೆಯ ಪಕ್ಕ ಹೋಟೇಲಿನಲ್ಲಿ ಕುಳಿತುಕೊಂಡಿದ್ದೆ. ಅಪಘಾತ ಆಗಿರುತ್ತದೆ ಅಂತ ತಿಳಿದು ನಾನು, ಚಾಸಾ-9 ರವರು ಬಂದಿರುತ್ತೇವೆ. ಅಪಘಾತ ಪಡಿಸಿದ ವಾಹನ ಸಂಖ್ಯೆ ಕೆ.ಎ-32, ಹೆಚ್.ಎ-5032 ಅಂತ ಇರುತ್ತದೆ. ಅಪಘಾತವು ಮೋಟರ ಸೈಕಲ್ ಸವಾರನು ಗುಲಬರ್ಗದಿಂದ ಬರುತ್ತಿದ್ದು ಆತನ ತಪ್ಪಿನಿಂದ ಆಗಿರುತ್ತದೆ. ಗಾಯಾಳುವನ್ನು ಚಾಸಾ-1 ರವರು ಅಂಬುಲೆನ್ಸನಲ್ಲಿ ಗುಲಬರ್ಗಕ್ಕೆ ತೆಗೆದುಕೊಂಡು ಹೋಗಿರುತ್ತಾರೆ. ಅಪಘಾತದಲ್ಲಿ ಶಾರದಾಬಾಯಿಗೆ ಕೈಕಾಲು, ಕಣ್ಣಿಗೆ ಹಾಗೂ ಹಣೆಗೆ ಗಾಯ ಆಗಿರುತ್ತದೆ. ಮಾರನೇ ದಿನ ಅವರು ತೀರಿಕೊಂಡಿರುತ್ತಾರೆ ಅಂತ ಗೊತ್ತಾಗಿರುತ್ತದೆ. ನಾನು ಈ ಕುರಿತು ಹೇಳಿಕೆ ನೀಡಿರುತ್ತೇನೆ. ಫಿರ್ಯಾದನ್ನು ಚಾಸಾ-1 ರವರು ನೀಡಿರುತ್ತಾರೆ. ವಾಹನವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿ.ಪಿ.3 ಮತ್ತು 4 ರಲ್ಲಿರುವ ವಾಹನವನ್ನು ನೋಡಿ ಗುರುತಿಸುತ್ತಾರೆ. ನಾನು, ಚಾಸಾ-1 ಮತ್ತು 9 ರವರು ಪೋಲೀಸ್ ಠಾಣೆಗೆ ಹೋಗಿದ್ದು ಅಲ್ಲಿ ವಾಹನ ಮತ್ತು ಅಪಘಾತಪಡಿಸಿದ ಆರೋಪಿತನನ್ನು ನೋಡಿರುತ್ತೇವೆ. ಅಪಘಾತಪಡಿಸಿದ ಚಾಲಕನ ಹೆಸರು ನನಗೆ ಗೊತ್ತಿರುವುದಿಲ್ಲ. ಆರೋಪಿ ಹಾಗೂ ವಾಹನವನ್ನು ಠಾಣೆಯಲ್ಲಿ ನೋಡಿರುವುದಾಗಿ ಪೋಲೀಸರಿಗೆ ನಾನು ಪುನ: ಹೇಳಿಕೆ ನೀಡಿರುತ್ತೇನೆ. ಅದರ ದಿನಾಂಕ ನನಗೆ ಗೊತ್ತಿರುವುದಿಲ್ಲ. ಇದನ್ನು ಹೊರತುಪಡಿಸಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಸ.ಸ. ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)**

ಪಾಟೀ ಸವಾಲು: ಸ.ಸ. ಅಭೀಯೋಜಕರಿಂದ

ಚಾಸಾ-1 ರವರು ನನಗೆ ಮತ್ತು ಚಾಸಾ-9 ರವರಿಗೆ ತಮ್ಮ ತಾಯಿ ಸಾಯಂಕಾಲ 6 ಆದರೂ ಬರಲಿಲ್ಲ ಅಂತ ಅವಳನ್ನು ಹುಡುಕಲು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ ಅಂದರೆ ಸರಿ. ಶಾರದಾಬಾಯಿಯವರು ತಮ್ಮ ಹೊಲದ ಬಲದಾರಿಯಲ್ಲಿ ಬಲಭಾಗದ ಪಕ್ಕಕ್ಕೆ ನಡೆದುಕೊಂಡು ಬರುತ್ತಿರುವಾಗ ಎದುರಿನಿಂದ ಮೋಟರ ಸೈಕಲ ಸವಾರನು ಅತೀ ವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ಡಿಕ್ಕಿ ಪಡಿಸಿರುತ್ತಾನೆ ಅಂತ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಶಾರದಾಬಾಯಿ ಇವಳು ದಿ: 30/11/2021 ರಂದು ಬಸವೇಶ್ವರ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪಡೆಯುವ ಕಾಲಕ್ಕೆ ಉಪಚಾರ ಫಲಿಸದೇ ಮೃತ ಹೊಂದಿರುತ್ತಾಳೆ ಅಂತ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ದಿ: 11/12/2021 ರಂದು ಪೋಲೀಸರು ಠಾಣೆಯಲ್ಲಿ ನಮ್ಮನ್ನು ಕರೆಯಿಸಿ ಶಾರದಾಬಾಯಿಗೆ ಅಪಘಾತಪಡಿಸಿದ ಮೋಟರ ಸೈಕಲ್ ಸವಾರ ಅನೀಲಕುಮಾರ ತಂದೆ ರಾಮು ಚೌಹಾನ, ಸಾ: ಇಂಗಳಗಿ ಅಂತ ನಮಗೆ ತೋರಿಸಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಸಿ.ಎಸ್.ಪಿ. ವಕೀಲರಿಂದ</u>

ನಾನು ಶಾಲೆ ಕಲೆತಿರುವುದಿಲ್ಲ. ನನಗೆ ಕನ್ನಡ ಸ್ವಲ್ಪ ಸ್ವಲ್ಪ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ಚಾಸಾ-1 ನಮ್ಮೂರಿನ ಗೌಡರು ಎಂದರೆ ಸರಿ. ಅವರು ನನ್ನ ಗೆಳೆಯರು ಎಂದರೆ ಸರಿ. ತೆಗನೂರು ಕ್ರಾಸ್ ಹತ್ತಿರ ಹೋಟೆಲ ಅಂಗಡಿ ಹಾಗೂ ಅಂಗಡಿಗಳು ಇವೆ ಎಂದರೆ ಸರಿ. ಹೋಟೆಲನಲ್ಲಿ ಸಾಕಷ್ಟು ಜನ ಇರುತ್ತಾರೆ ಎಂದರೆ ಸರಿ. ಸಂಜೆ 6 ಗಂಟೆಗೆ ನಸುಕಿನ ಕತ್ತಲು ಇರುತ್ತದೆ ಎಂದರೆ ಸರಿ. ಗುಲಬರ್ಗ-ಶಹಾಬಾದ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಬರುತ್ತವೆ ಎಂದರೆ ಸರಿ. ದಿ: 30/11/2021 ರಂದು ನಾನು ಹೋಟೆಲಿನಲ್ಲಿ ಕುಳಿತುಕೊಂಡಿದ್ದೆ ಎಂದರೆ ಸರಿ. ಅಪಘಾತವನ್ನು ನೀವು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸಾಕ್ಷಿಯು ಅಪಘಾತ ನೋಡಿರುತ್ತೇನೆ ಆದರೆ ಮುಂದುವರೆದು ಅಪಘಾತ ಆದ ನಂತರ ಹೋಗಿರುವುದಾಗಿ ಹೇಳುತ್ತಾರೆ. ಅಪಘಾತವನ್ನು ಕಣ್ಣಾರೆ ನೋಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು, ಚಾಸಾ-9 ಹಾಗೂ 1 ರವರು ಹೋಗಿ ನೋಡಲಾಗಿ ಶಾರದಾಬಾಯಿಯವರ ತಲೆಗೆ, ಕೈಕಾಲು ಹಾಗೂ ಕಣ್ಣಿಗೆ ಗಾಯ ಆಗಿರುವುದಾಗಿ ನೋಡಿರುತ್ತೇವೆ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗಾಯಾಳುವನ್ನು ಅಂಬುಲೆನ್ಸನಲ್ಲಿ ಕಳುಹಿಸಿರುತ್ತೇವೆ. ಸದರಿ ಸಂಗತಿಯನ್ನು ನಾನು ಪೋಲಿಸರಿಗೆ ಹೇಳಿ ಬರೆಸಿರುತ್ತೇನೆ. ನಾನು ಪೋಲಿಸರಿಗೆ ಈ ರೀತಿ ಹೇಳಿಕೆ ನೀಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಠಾಣೆಯಲ್ಲಿ ಆರೋಪಿ ಹಾಗೂ ವಾಹನವನ್ನು ತೋರಿಸಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಚಾಸಾ-1 ರವರಿಗೆ ಸಹಾಯ ಮಾಡಲು ಅಪಘಾತ ನೋಡಿರುವುದಾಗಿ ಹಾಗೂ ಹೇಳಿಕೆ ಕೊಟ್ಟಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೋಲೀಸರು ಈ ರೀತಿ ಯಾವುದೇ ಘಟನೆ ಆದರೂ ನನ್ನ ಹೇಳಿಕೆಯನ್ನು ಪಡೆದುಕೊಳ್ಳುತ್ತಾರೆ ಎಂದರೆ ಸರಿ. ಚಾಸಾ-1 ಹಾಗೂ ಪೋಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.3 ಮತ್ತು 4 ರಲ್ಲಿ ವಾಹನ ನೋಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)